15ನೇ ಅ
52

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ||ಮುಳೆ ಇವರು ನಿಯಮ 330 ರಡಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ:**

**"ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಹೊದಿಗೆರೆ (ಉದಯಗಿರಿ) ಗ್ರಾಮದಲ್ಲಿರುವ, ಸ್ವರಾಜ್ಯ ಸಂಸ್ಥಾಪಕರಾದ ಛತ್ರಪತಿ ಶಿವಾಜಿ ಮಹಾರಾಜರ ಪೂಜ್ಯ ತಂದೆಯವರೂ ಹಾಗೂ ಸ್ವರಾಜ್ಯ ಸಂಕಲ್ಪಕರೂ ಆದ ಶ್ರೀ ಶಹಾಜಿ ರಾಜೇ ಬೋಸ್ಲೆ ಅವರ ಐಕ್ಯ ಸ್ಥಳ/ಸಮಾಧಿಯನ್ನು ಪುನರುಜ್ಜೀವನಗೊಳಿಸಿ ಪ್ರವಾಸಿ ಹಾಗೂ ಐತಿಹಾಸಿಕ ತಾಣವಾಗಿ ಅಭಿವೃದ್ಧಿಪಡಿಸುವ ಬಗ್ಗೆ ಗಮನ ಸೆಳೆದಿರುವ ಕುರಿತು.**

**ಉತ್ತರ:**

ಶ್ರೀ ಶಹಾಜಿ ರಾಜೇ ಬೋಸ ಸಮಾಧಿ ಸ್ಮಾರಕವು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ASI) ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಸದರಿ ತಾಣವನ್ನು 2024-29ನೇ ಪ್ರವಾಸೋದ್ಯಮ ನೀತಿಯಡಿ ಪ್ರವಾಸಿ ತಾಣವನ್ನಾಗಿ ಗುರುತಿಸಲಾಗಿರುತ್ತದೆ.

ಆದರೆ ಸರ್ಕಾರದ ಆದೇಶ ಸಂಖ್ಯೆ:ಟಿಒಆರ್/149/ಟಿಡಿಪಿ/2022(2), ದಿನಾಂಕ:21.06.2022ರಲ್ಲಿ ಚನ್ನಗಿರಿ ತಾಲ್ಲೂಕಿನ ಹೊದಿಗೆರೆ ಗ್ರಾಮದಲ್ಲಿರುವ ಶಿವಾಜಿ ಮಹಾರಾಜರ ತಂದೆಯಾದ ಶಾಹಜಿ ರಾಜೇ ಬೋಸ್ಲೆ ಇವರ ಸಮಾಧಿಯ ಬಳಿ ಮುಖ್ಯ ಪ್ರವೇಶ ದ್ವಾರ ನಿರ್ಮಾಣ ಕಾಮಗಾರಿಯನ್ನು ರೂ.25.00 ಲಕ್ಷಗಳ ಅಂದಾಜಿನಲ್ಲಿ ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ (ಕೆ.ಟಿ.ಐ.ಎಲ್.)ದ ಮೂಲಕ ಕೈಗೊಳ್ಳಲು ಮಂಜೂರಾತಿ ನೀಡಲಾಗಿತ್ತು.

ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ:ಆಇ/1/ಟಿಎಫ್ಪಿ/2023, ದಿನಾಂಕ:31.07.2023 ರಲ್ಲಿನ ಕಂಡಿಕೆ 3ರಲ್ಲಿ ಹಿಂದಿನ ಸರ್ಕಾರದಿಂದ ಅನುಮೋದನೆಗೊಂಡು ಅಂದಿನವರೆಗೆ ಪ್ರಾರಂಭವಾಗದಿರುವ (Un started) ಕಾಮಗಾರಿಗಳ ಬಗ್ಗೆ ಸಂಬಂಧಪಟ್ಟ ಸಚಿವರ ಅನುಮೋದನೆಯೊಂದಿಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಆಡಳಿತ ಇಲಾಖೆಗೆ ಕ್ರಮವಹಿಸಲು ತಿಳಿಸಲಾಗಿತ್ತು. ಅದರಂತೆ, ಆಯುಕ್ತಾಲಯದ ಕಛೇರಿಯ ಪತ್ರ ದಿನಾಂಕ: 18.11.2023ರಲ್ಲಿ ಮೇಲ್ಕಂಡ ಕಾಮಗಾರಿಯೂ ಒಳಗೊಂಡಂತೆ ಹಿಂದಿನ ಸಾಲುಗಳಲ್ಲಿ ಮಂಜೂರಾಗಿ ಅಂದಿನವರೆಗೂ ಪ್ರಾರಂಭಿಸದೇ ಇರುವ ಒಟ್ಟು 144 ಕಾಮಗಾರಿಗಳನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಅತುಲ್ ಪಾಟ್ನೆ, ಭಾ.ಆ.ಸೇ, , ಪ್ರಧಾನ ಕಾರ್ಯದರ್ಶಿಗಳು, Tourism Tourism and and Cultural Affairs Department, ಮಹಾರಾಷ್ಟ್ರ ಸರ್ಕಾರ ರವರ ಪತ್ರ ದಿನಾಂಕ:25.06.2025ರಲ್ಲಿ ಛತ್ರಪತಿ ಶಹಾಜಿ ರಾಜೇ ಭೋಸ್ಲೆ ಅವರ ಸಮಾಧಿ ಮತ್ತು ಸಂಬಂಧಿತ ಪರಂಪರೆಯ ತಾಣಗಳ ಜೀರ್ಣೋದ್ಧಾರ ಹಾಗೂ ಅಭಿವೃದ್ಧಿಪಡಿಸಲು ಕೋರಿದ್ದು, ಈ ಬಗ್ಗೆ ಪುರಾತತ್ವ ಅಧೀಕ್ಷಕರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಬೆಂಗಳೂರು ವೃತ್ತ ರವರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಲಾಗಿರುತ್ತದೆ.

ಶಹಾಜಿ ರಾಜೇ ಭೋಸಲೆ ಸಮಾಧಿಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ASI), ಬೆಂಗಳೂರು ವಲಯದ ವತಿಯಿಂದ ಉತ್ತಮವಾಗಿ ನಿರ್ವಹಿಸಲಾಗುತ್ತಿದೆ ಎಂದು ಪುರಾತತ್ವ ಅಧೀಕ್ಷಕರು , ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ರವರು ತಿಳಿಸಿರುತ್ತಾರೆ. ಈ ಸ್ಮಾರಕದ ಆವರಣದಲ್ಲಿ ಕುಡಿಯುವ ನೀರಿನ ಸೌಲಭ್ಯ, ಸೂಚನಾ ಫಲಕಗಳು, ಸುತ್ತುಗೋಡೆ, ಕಲ್ಲಿನ ಪಾದಚಾರಿ ಮಾರ್ಗ ಹಾಗೂ ಉದ್ಯಾನವನ ಸೇರಿದಂತೆ ಸಾರ್ವಜನಿಕರಿಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಒದಗಿಸಲಾಗಿದೆ. ಅಲ್ಲದೆ, ಸ್ಮಾರಕದ ಅವಶ್ಯಕತೆಗೆ ಅನುಗುಣವಾಗಿ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಕೈಗೆತ್ತಿಕೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. ಆದಾಗ್ಯೂ, ಸ್ಮಾರಕದ ಸುತ್ತಮುತ್ತಲ ಪ್ರದೇಶದಲ್ಲಿ

-2

ಸಾಕಷ್ಟು ಸ್ಥಳಾವಕಾಶದ ಕೊರತೆಯಿಂದಾಗಿ, ಪ್ರವಾಸಿಗರಿಗೆ ದೊಡ್ಡ ಪ್ರಮಾಣದ ಸೌಲಭ್ಯಗಳನ್ನು ಕಲ್ಪಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳೊಂದಿಗೆ ಎ.ಎಸ್.ಐ ಅಧಿಕಾರಿಗಳು ಕೈಗೊಂಡ ಜಂಟಿ ಪರಿಶೀಲನೆಯನ್ನು ನಡೆಸಲಾಗಿದ್ದು, ಈ ಸಂದರ್ಭದಲ್ಲಿ ಪ್ರಸ್ತಾಪಿಸಲಾದ ಕಾಮಗಾರಿಗಳನ್ನು ಲಭ್ಯವಿರುವ ಅನುದಾನದ ಆಧಾರದ ಮೇಲೆ ಹಾಗೂ ಸಕ್ಷಮ ಪ್ರಾಧಿಕಾರದಿಂದ ಅಗತ್ಯ ಅನುಮೋದನೆಗಳನ್ನು ಪಡೆದ ನಂತರ ಅನುಷ್ಠಾನಗೊಳಿಸಲಾಗುವುದು ಎಂದು ಪುರಾತತ್ವ ಅಧೀಕ್ಷಕರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಬೆಂಗಳೂರು ವೃತ್ತ ರವರು ತಿಳಿಸಿರುತ್ತಾರೆ.

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ದಾವಣಗೆರೆ ಜಿಲ್ಲೆ ರವರ ಪತ್ರ ಸಂಖ್ಯೆ: ಜಿ.ಪ.ಅ.ಸ/ದಾ/ಹೊ.ಷಹಾಜಿ ಬೋಸೆ/2024-25/12 ದಿನಾಂಕ:08.04.2025ರಲ್ಲಿ ಶ್ರೀ ಷಹಾಜಿ ರಾಜೇ ಬೋಸ್ಲೆ ರವರ ಸ್ಮಾರಕದ ಮುಂಬಾಗದಲ್ಲಿ ಫೇವರ್ಸ್, ಸೈನೇಜ್, ಚನ್ನಗಿರಿ ತಾಲ್ಲೂಕು ಬೆಂಕಿಕೆರೆ-ಹೊದಿಗೆರೆ ರಸ್ತೆಗೆ ಮತ್ತು ಚನ್ನಗಿರಿ ತಾಲ್ಲೂಕು ನುಗ್ಗೆಹಳ್ಳಿ ಕ್ರಾಸ್-ಹೊದಿಗೆರೆ ರಸ್ತೆಗೆ ಶ್ರೀ ಷಹಾಜಿ ಬೋಸ್ಲೆ ಪ್ರವೇಶ ದ್ವಾರ ನಿರ್ಮಾಣ ಹಾಗೂ ಶ್ರೀ ಷಹಾಜಿ ರಾಜೇ ಬೋಸ್ಲೆ ಸ್ಮಾರಕದ ಮುಂಭಾಗದಲ್ಲಿ ವಾಹನ ನಿಲ್ದಾಣ ನಿರ್ಮಾಣ ಕಾಮಗಾರಿಯನ್ನು ರೂ. 101.11 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳುವ ಬಗ್ಗೆ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ದಾವಣಗೆರೆ ಜಿಲ್ಲೆ ರವರು ಮೇಲ್ಕಾಣಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಎ.ಎಸ್.ಐ ರವರರಿಗೆ ದಿನಾಂಕ:27.07.2026ರಂದು ಪತ್ರ ಬರೆಯಲಾಗಿದ್ದು, ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡಿದ್ದಲ್ಲಿ, ಪ್ರವಾಸೋದ್ಯಮ ಇಲಾಖೆಗೆ ಆಯವ್ಯಯದ ಲಭ್ಯತೆಗುನುಣವಾಗಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸಲಾಗುವುದು

**ಸಂಖ್ಯೆ: ಟಿಓಆರ್ 183 ಟಿಡಿವಿ 2026**

**(ಕೆ.ಜೆ. ಜಾರ್ಜ್)**
ಇಂಧನ ಹಾಗೂ ಪ್ರವಾಸೋದ್ಯಮ ಸಚಿವರು